# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಸ್ ರವಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 170
ಉತ್ತರಿಸಬೇಕಾದ ದಿನಾಂಕ : 16-07-2024
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2017 ನೇ ಸಾಲಿನ ರೂ.50,000/-ಗಳ ಸಾಲ ಮನ್ನಾ ಯೋಜನೆ ಮತ್ತು 2018 ನೇ ಸಾಲಿನ ರೂ.1,00,000/-ಗಳ ಸಾಲ ಮನ್ನಾ ಯೋಜನೆಯಡಿ ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಿಗೆ ಬಿಡುಗಡೆಯಾಗದೆ ಬಾಕಿ ಉಳಿದಿರುವ ಸುಮಾರು ರೂ.1075 ಲಕ್ಷಗಳ ಅನುದಾನವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದಲ್ಲಿ, ಬಾಕಿ ಉಳಿದಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು : (ಸಂಪೂರ್ಣ ವಿವರ ನೀಡುವುದು) | 2017 ನೇ ಸಾಲಿನ ರೂ.50,000/-ಗಳ ಸಾಲ ಮನ್ನಾ ಯೋಜನೆಯಡಿ ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಡಿಸಿಸಿ ಬ್ಯಾಂಕಿಗೆ ಅಧ್ಯರ್ಪಿತಗೊಂಡ ಮತ್ತು ಸ್ವಂತ ಬಂಡವಾಳದಲ್ಲಿ ಸಾಲ ನೀಡುವ ಸಹಕಾರ ಸಂಘಗಳು 86,703 ರೈತ ಸದಸ್ಯರಿಗೆ ರೂ.360.86 ಕೋಟಿಗಳ ಸಾಲ ಮನ್ನಾ ಕ್ಲೇಂ ಮಾಡಿದ್ದು, ಈ ಪೈಕಿ 2017-18 ಮತ್ತು 2018-19 ರಲ್ಲಿ 82,899 ರೈತರ ರೂ.345.07 ಕೋಟಿಗಳ ಸಾಲ ಮನ್ನಾ ಅನುದಾನ ಬಿಡುಗಡೆ ಮಾಡಲಾಗಿತ್ತು. 2023-24 ನೇ ಸಾಲಿನಲ್ಲಿ ದಿನಾಂಕ:28.03.2024 ರಂದು 3804 ರೈತರಿಗೆ ರೂ.15.79 ಕೋಟಿಗಳ ಸಾಲ ಮನ್ನಾ ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಿಂದ ಪೂರ್ಣ ಮೊತ್ತ ಬಿಡುಗಡೆ ಮಾಡಲಾಗಿದೆ.<br><br>2018 ನೇ ಸಾಲಿನ ರೂ.1.00 ಲಕ್ಷ ಸಾಲಮನ್ನಾ ಯೋಜನೆಯಡಿ ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಡಿಸಿಸಿ ಬ್ಯಾಂಕಿಗೆ ಅಧ್ಯರ್ಪಿತಗೊಂಡ ಮತ್ತು ಸ್ವಂತ ಬಂಡವಾಳದಲ್ಲಿ ಸಾಲ ನೀಡುವ ಸಹಕಾರ ಸಂಘಗಳಲ್ಲಿ 86,305 ರೈತ ಸದಸ್ಯರಿಗೆ ರೂ.359.52 ಕೋಟಿಗಳ ಸಾಲ ಮನ್ನಾ ಮಾಡಲು ಅರ್ಹತೆಯನ್ನು ಗುರುತಿಸಿ ಹಸಿರು ಪಟ್ಟಿ ತಯಾರಿಸಿದ್ದು, ಈ ಪೈಕಿ |

| | | |
|---|---|---|
| | | 2018–19, 2019–20 ಮತ್ತು 2020–21 ರಲ್ಲಿ 80,257 ರೈತರ ರೂ.345.08 ಕೋಟಿಗಳ ಸಾಲ ಮನ್ನಾ ಅನುದಾನ ಬಿಡುಗಡೆ ಮಾಡಲಾಗಿದ್ದು, 6048 ರೈತರಿಗೆ ರೂ.14.45 ಕೋಟಿಗಳ ಸಾಲ ಮನ್ನಾ ಬಿಡುಗಡೆಗೆ ಬಾಕಿ ಇರುತ್ತದೆ.<br><br>ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಸಹಕಾರ ಸಂಘಗಳು ಒಳಗೊಂಡಂತೆ ರಾಜ್ಯದ ಸಹಕಾರ ಸಂಘಗಳಲ್ಲಿ ಹಸಿರು ಪಟ್ಟಿ ರೈತರ ಪೈಕಿ ಬಾಕಿ ಇರುವ 31,003 ರೈತರಿಗೆ ರೂ. 167.51 ಕೋಟಿಗಳನ್ನು ಮತ್ತು ಅರ್ಹತೆ ಗುರುತಿಸಲು ಬಾಕಿ ಇರುವ ರೈತರಿಗೆ ಸಂಬಂಧಿಸಿದಂತೆ ರೂ.64.49 ಕೋಟಿ ಒಟ್ಟಾರೆ ಅಂದಾಜು ರೂ. 232.00 ಕೋಟಿಗಳಿಗೆ ಆಯವ್ಯಯ ಅವಕಾಶ ಕಲ್ಪಿಸಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದು, ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. |
| ಆ) | ಬಾಕಿ ಉಳಿದಿರುವ ಅನುದಾನದ ಬಿಡುಗಡೆಗಾಗಿ 5–6 ವರ್ಷಗಳಿಂದ ಕಾಯುತ್ತಿರುವ ಸುಮಾರು 2310 ಅರ್ಹ ರೈತ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೀಡಾಗಿರುವುದು ಮತ್ತು ಇವರ ಸಾಲಮನ್ನಾ ಆಗದಿರುವುದರಿಂದ ಇವರಿಗೆ ಹೊಸ ಸಾಲ ಸೌಲಭ್ಯಗಳನ್ನು ಒದಗಿಸಲು ಬ್ಯಾಂಕ್‌ಗಳಿಗೆ ಕಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :<br><br>ಬಂದಿದ್ದಲ್ಲಿ, ಇಂತಹ ರೈತರಿಗೆ ಹೊಸ ಸಾಲ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | 2017ನೇ ಸಾಲಿನ ರೂ.50,000/–ಗಳ ಸಾಲಮನ್ನಾ ಯೋಜನೆಗೆ ಸಂಬಂಧಿಸಿದಂತೆ 2023–24 ನೇ ಸಾಲಿನಲ್ಲಿ ದಿನಾಂಕ:28.03.2024 ರಂದು 3792 ರೈತರಿಗೆ ರೂ.15.79 ಕೋಟಿಗಳ ಸಾಲ ಮನ್ನಾ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಪುನಃ ಸಾಲ ಪಡೆಯಲು ಎಲ್ಲ ರೈತರು ಅರ್ಹರಿರುತ್ತಾರೆ.<br><br>ಸಂಬಂಧಿಸಿದ ಸಹಕಾರ ಸಂಘಗಳು ರೈತರಿಂದ ಅರ್ಜಿ ಪಡೆಯುವ ಮೂಲಕ ಈ ರೈತ ಸದಸ್ಯರುಗಳಿಗೆ ಪುನಃ ಹೊಸ ಸಾಲ ನೀಡಲು ಕ್ರಮವಿಡಲಾಗುತ್ತಿದೆ.<br><br>ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಸಹಕಾರ ಸಂಘಗಳಲ್ಲಿ 6048 ರೈತರಿಗೆ ರೂ.14.45 ಕೋಟಿಗಳ ಸಾಲ ಮನ್ನಾ ಬಿಡುಗಡೆಗೆ ಬಾಕಿ ಇರುತ್ತದೆ. |

| | | |
|---|---|---|
| | | ಈ ಸಂಘಗಳು ಒಳಗೊಂಡಂತೆ ರಾಜ್ಯದ ಸಹಕಾರ ಸಂಘಗಳಲ್ಲಿ ಹಸಿರು ಪಟ್ಟಿ ರೈತರ ಪೈಕಿ ಬಾಕಿ ಇರುವ 31,003 ರೈತರಿಗೆ ರೂ. 167.51 ಕೋಟಿಗಳನ್ನು ಮತ್ತು ಅರ್ಹತೆ ಗುರುತಿಸಲು ಬಾಕಿ ಇರುವ ರೈತರಿಗೆ ಸಂಬಂಧಿಸಿದಂತೆ ರೂ.64.49 ಕೋಟಿ ಒಟ್ಟಾರೆ ಅಂದಾಜು ರೂ. 232.00 ಕೋಟಿಗಳಿಗೆ ಆಯವ್ಯಯ ಅವಕಾಶ ಕಲ್ಪಿಸಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದು, ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ: ಸಿಒ 145 ಸಿಎಲ್ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**